

ಆರ್ಯಸಮಾಜದಲ್ಲಿ ವಿವಾಹ

ದಯಾನಂದರು ವೇದಗಳ ಕಾಲದಲ್ಲಿ ಇದ್ದಿರಬಹುದಾಗ ಜಾತಿಯಿಲ್ಲದ ಸಮಾಜವನ್ನು ಕಟ್ಟುವ ಉದ್ದೇಶದಲ್ಲಿ ಆರ್ಯಸಮಾಜವನ್ನು ಸ್ಥಾಪಿಸಿದರು. ಇಲ್ಲಿ ಎಲ್ಲ ಜಾತಿ, ಧರ್ಮ, ವರ್ಗದ ಜನರಿಗೂ ಬಾಗಿಲು ತೆರೆದರು. 'ವೇದಗಳ ಜ್ಞಾನ ಇಡೀ ವಿಶ್ವಕ್ಕೇ ತೆರೆದದ್ದು' ಎಂಬುದು ಅವರ ಅಭಿಮತವಾಗಿತ್ತು.

ಯಾವ ಆಧಾರವೂ ಇಲ್ಲ ಎಂಬುದು ಅವರ ಗಟ್ಟಿ ನಂಬುಗೆಯಾಗಿತ್ತು.

ಈ ರೀತಿ ಛಿದ್ರವಾದ ಸಮಾಜದಲ್ಲಿ, ಶೋಷಕರು, ಶೋಷಿತರ ಸಂಘರ್ಷದಲ್ಲಿ, ಏಕತೆ, ಭ್ರಾತೃತ್ವ ಭಾವನೆ ಎಲ್ಲಿ ಸಾಧ್ಯ? ಬ್ರಿಟಿಷರು ಬಂದು ನಮ್ಮನ್ನು ಒಡೆದು ಆಳಲಿಲ್ಲ. ನಾವೇ ಒಡೆದು ಛಿದ್ರವಾಗಿ ಬಿದ್ದಿದ್ದೆವು, ಅವರಿಗೆ ಬಂದು ಆಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೆವು. ಹೊರಗಿನಿಂದ ಬಂದ ದಾಳಿಕೋರರು, ಆಕ್ರಮಣಕಾರಿಗಳು, ಬ್ರಿಟಿಷರಂತಹ ವಿದೇಶೀಯರು, ಪೋರ್ಚುಗೀಸರು, ಹಿಡಿಯಷ್ಟು ಜನರಷ್ಟೆ ಇದ್ದದ್ದು. ಅಗಾಧ ಸಂಖ್ಯೆಯಲ್ಲಿದ್ದ ಭಾರತೀಯರು ಸೋತದ್ದು ಹೇಗೆ? 'ನಾವು ಇಂದು ವಿದೇಶೀಯರಿಗೆ ದಾಸರಾಗಿರುವುದು ನಮ್ಮ ದೌರ್ಬಲ್ಯದಿಂದಲೇ ಹೊರತು, ವಿದೇಶೀಯವರ ಪರಾಕ್ರಮದಿಂದಲ್ಲ' ಎಂದರು ದಯಾನಂದರು. 'ಇಂದಿನ ಭರತವರ್ಷದ ದುರ್ಗತಿಗೆ ವಿದೇಶೀಯರಿಗಿಂತ ನಮ್ಮವರೇ ಹೆಚ್ಚು ಕಾರಣ. ಜಾತಿ ಪದ್ಧತಿಯ ಹಗ್ಗವನ್ನು ಹರಿದೆಸೆಯಿರಿ' ಎಂದು ದಯಾನಂದರು ಕರೆ ಕೊಟ್ಟರು.

ದಯಾನಂದರ ದೇಶಭಕ್ತಿ, ಅವರನ್ನು ಉಚ್ಚ ಆಂಗ್ಲ ಅಧಿಕಾರಿಗಳ ಎದುರಲ್ಲೇ 'ವಿದೇಶೀಯರು ನಮ್ಮ ಸಂಪತ್ತೆಲ್ಲವನ್ನೂ ಹೀರಿ, ಈ ಸಮೃದ್ಧ ಭೂಮಿಯನ್ನು ದಾರಿದ್ರ್ಯದ ಪರಾಕಾಷ್ಠೆಗೆ ಮುಟ್ಟಿಸಿದ್ದಾರೆ. ಇದು ಸ್ವರ್ಣಭೂಮಿ. ಸ್ವರಾಜ್ಯ ಲಭಿಸಿದರೆ ಸ್ವಲ್ಪ ಕಾಲದಲ್ಲೇ ಸುಸಮೃದ್ಧವಾಗುವುದು' ಎಂದು ಸಾರುವಂತೆ ಮಾಡಿತ್ತು. ಪ್ರಥಮ ಬಾರಿಗೆ 'ಸ್ವರಾಜ್ಯ'ದ ಕಲ್ಪನೆಯನ್ನು ದಯಾನಂದರು ನೀಡಿದ್ದರು.

'ಜನ್ಮದಿಂದ ನಿರ್ಧರಿಸುವ ಜಾತಿ ಪದ್ಧತಿಗೆ ವೇದಗಳಲ್ಲಿ ಸಮರ್ಥನೆ ಇಲ್ಲ' ಎಂದು ದಯಾನಂದರು ಒತ್ತಿ ಹೇಳಿದರು. ಬಹುಸಂಖ್ಯಾತರಾದ ಹಿಂದೂಗಳಿಗೆ ವೇದಗಳಲ್ಲಿ ಅತ್ಯಂತ ಹೆಚ್ಚಿನ ಗೌರವವಿರುವುದು ಅವರಿಗೆ ತಿಳಿದಿತ್ತು. ಆ ವೇದಗಳನ್ನು ಜನಸಾಮಾನ್ಯರಿಗೆ ಎಟಕುವಂತೆ ಮಾಡಿದರೆ, ಸಮಾಜ ಸುಧಾರಣೆ ಸಾಧ್ಯ ಎಂದು ಅವರಿಗೆ ಅನಿಸಿತು. ವೇದಗಳ ಆಧಾರವಿಲ್ಲದೆಯೂ ಅವರು ವೈಚಾರಿಕ ಕ್ರಾಂತಿಗೆ ಆಹ್ವಾನ ನೀಡಬಹುದಿತ್ತು. ಆದರೆ ಅದು ಮತ್ತಷ್ಟು ಕಷ್ಟದ ಹೋರಾಟವಾಗುತ್ತಿತ್ತು. ತಮಗೆ ವಿಶ್ವಾಸವಿರುವ ವೇದಗಳನ್ನೇ ಉಲ್ಲೇಖಿಸಿ ತಿಳಿಸುವುದು ದಯಾನಂದರ ನಂಬುಗೆ ಮತ್ತು ಕಾರ್ಯತಂತ್ರದ ವಿಧಾನ ಎರಡೂ ಆಗಿದ್ದಿರಬಹುದು. ಅಥರ್ವವೇದದ ಒಂದು ಮಂತ್ರವಿದೆ:

ಸಹೃದಯಂ ಸಾಂಮನಸ್ಯಮವಿದ್ವೇಷಂ ಕೃಣೋಮಿ ವಃ
ಅನ್ಯೋ ಅನ್ಯಮಭಿಹರ್ಯತ ವತ್ಸಂ ಜಾತಮಿವಾಘ್ನ್ಯಾ

ಇದರ ಅರ್ಥ:

ನಾನು ನಿಮ್ಮ ಹೃದಯ ಮತ್ತು ಮನಸ್ಸು ದ್ವೇಷದಿಂದ ಮುಕ್ತವಾಗಿರುವಂತೆ ಬೆಸೆಯುತ್ತೇನೆ. ಹಸುವು ಆಗತಾನೇ ಹುಟ್ಟಿದ ಕರುವಿನೊಂದಿಗೆ ವ್ಯವಹರಿಸುವಂತೆ ಪರಸ್ಪರರೊಂದಿಗೆ ವ್ಯವಹರಿಸಿ.

ಇಷ್ಟು ಪ್ರೀತಿ ಭ್ರಾತೃತ್ವ ಭಾವನೆಯನ್ನು ವೇದಗಳು ವ್ಯಕ್ತಪಡಿಸಿರುವಾಗ, ಈ ವಿಘಟನೆ, ಮೇಲು–ಕೀಳು ಅಮಾನವೀಯ ಎಂದು ದಯಾನಂದರು ಭಾವಿಸಿದ್ದರು. ಬದಲಾವಣೆಯ ಆಶಯ, ಶೋಷಿತ ವರ್ಗದ ದನಿ ದಯಾನಂದರದು. ಅವರು ವೇದಗಳ ಕಾಲದಲ್ಲಿ ಇದ್ದಿರಬಹುದಾಗ ಜಾತಿಯಿಲ್ಲದ ಸಮಾಜವನ್ನು ಕಟ್ಟುವ ಉದ್ದೇಶದಲ್ಲಿ ಆರ್ಯಸಮಾಜವನ್ನು ಸ್ಥಾಪಿಸಿದರು. ಇಲ್ಲಿ ಎಲ್ಲ ಜಾತಿ, ಧರ್ಮ, ವರ್ಗದ ಜನರಿಗೂ ಬಾಗಿಲು ತೆರೆದರು. 'ವೇದಗಳ ಜ್ಞಾನ ಇಡೀ ವಿಶ್ವಕ್ಕೇ ತೆರೆದದ್ದು' ಎಂಬುದು ಅವರ ಅಭಿಮತವಾಗಿತ್ತು.

ಋಗ್ವೇದ ರಚನೆಯ ಕಡೆಯ ಭಾಗದ 'ಪುರುಷಸೂಕ್ತ'ದ ಒಂದೇ ಒಂದು ಮಂತ್ರ, ವರ್ಣ ವಿಭಜನೆಯ ಆರಂಭವನ್ನು ಬಹುಶಃ ಸೂಚಿಸಿತ್ತು. ಇದನ್ನೇ ಶೋಷಣೆಯ ಅಸ್ತ್ರವಾಗಿ ಬಳಸಿಕೊಂಡವರಿದ್ದರು. ಕಾಶಿಯ ಪ್ರಸಿದ್ಧ ಸನ್ಯಾಸೀ ವಿಶುದ್ಧಾನಂದರು, 'ಬ್ರಾಹ್ಮಣಃ ಅಸ್ಯ ಮುಖಂ ಆಸೀತ್...' ಮಂತ್ರಕ್ಕೆ ಅರ್ಥವನ್ನು ಹೇಳುತ್ತಾ, 'ಬ್ರಾಹ್ಮಣನು ಬ್ರಹ್ಮನ ಮುಖದಿಂದ ಹುಟ್ಟಿದನು' ಎಂದು ಆರಂಭಿಸಿ, 'ಶೂದ್ರ ಪಾದದಿಂದ ಹುಟ್ಟಿದ' ಎಂದು ಹೇಳುವಾಗ – 'ನಿರಾಕಾರನಾದ ಬ್ರಹ್ಮನಿಗೆ ಮುಖವೇ ಇಲ್ಲ. ಇನ್ನು ಅವನ ಮುಖದಿಂದ ಬ್ರಾಹ್ಮಣ ಹುಟ್ಟುವುದು ಹೇಗೆ?' ಎಂದು ದಯಾನಂದರು ಸವಾಲೆಸೆದಿದ್ದರು. 'ಹುಟ್ಟಿನಿಂದಲೇ ಜಾತಿ' ಎಂಬ ಪ್ರಚಲಿತ ದುಷ್ಟ ಜಾತಿಪದ್ಧತಿಯನ್ನು ಉಗ್ರವಾಗಿ ಖಂಡಿಸುವುದು ದಯಾನಂದರಿಗೆ ಮುಖ್ಯವಿತ್ತು.

'ಇಂದು ಯಾವುದನ್ನು ಹಿಂದೂ ಧರ್ಮ ಎನ್ನುತ್ತಾರೋ, ಅದು ವೇದಗಳ ಪ್ರಕಾರವಿಲ್ಲ. ಮೊದಲಾಗಿ, ಹಿಂದೂ ಎಂಬ ಹೆಸರೇ ನಮ್ಮದಲ್ಲ. ಅವತಾರವಾದ, ವಿಗ್ರಹಾರಾಧನೆ, ಜಾತಿಪದ್ಧತಿ, ಮೃತಕಶ್ರಾದ್ಧ ಇವೆಲ್ಲವೂ ವೇದ ವಿರುದ್ಧವಾದವು' ಎಂದರು.

'ವೈದಿಕ ವರ್ಣವ್ಯವಸ್ಥೆ ಮಾನವರು ಮಾಡುವ ಕಾರ್ಯಗಳನ್ನಾಧರಿಸಿದ ನಾಲ್ಕು ವರ್ಗಗಳು ಮಾತ್ರ. ಅವು ಅಪರಿವರ್ತನೀಯವಾದುವಲ್ಲ. ಅಥವಾ ಹುಟ್ಟಿನಿಂದಲೇ ಬರುವುದಾಗಲೀ ಅಲ್ಲ' ಎಂಬುದು ಅವರ ಗಾಢ ನಂಬುಗೆಯಾಗಿತ್ತು. 'ಬ್ರಾಹ್ಮಣನ ಮಗ ಹುಟ್ಟಿನಿಂದಲೇ ಬ್ರಾಹ್ಮಣನಾಗುವುದಿಲ್ಲ. ಕಾಲೇಜಿನ ಪ್ರೊಫೆಸರ್ ಒಬ್ಬನ ಮಗ ಹುಟ್ಟಿನಿಂದಲೇ ಪ್ರೊಫೆಸರ್ ಆಗಲಾರ. ಹುಟ್ಟಿನಿಂದ ಯಾರೂ ಬ್ರಾಹ್ಮಣರಾಗಿ ಹುಟ್ಟುವುದಿಲ್ಲ, ಶೂದ್ರರಾಗಿ ಕೂಡಾ' – ಇದು ಇಂದಿಗೂ ಆರ್ಯಸಮಾಜದ ಅಭಿಮತ.

'ತನ್ನ ಕಾಯಕದಿಂದ ಶೂದ್ರ ಬ್ರಾಹ್ಮಣನಾಗಬಲ್ಲನು. ಬ್ರಾಹ್ಮಣ ಶೂದ್ರನಾಗಬಲ್ಲನು' ಎಂದು ಉದಾಹರಣೆಯಾಗಿ ದಯಾನಂದರು, 'ಪ್ರಾಚೀನ ಕಾಲದ ವ್ಯಾಸ, ಪರಾಶರ, ವಾಲ್ಮೀಕಿ, ಕೌಂಡಿನ್ಯ, ಸತ್ಯಕಾಮ, ಮಾತಂಗ ಇವರಾರೂ ಹುಟ್ಟಿನಿಂದ ಬ್ರಾಹ್ಮಣರಲ್ಲ. ಆದರೆ ಸಾಧನೆಯಿಂದ ಬ್ರಾಹ್ಮಣರಾದವರು' ಎಂದು ಉಲ್ಲೇಖಿಸಿದರು.

ದಯಾನಂದರು ಸಾಮಾಜಿಕ ಕ್ರಾಂತಿಯನ್ನು ಬಯಸಿದ್ದರು. ಭಾರತದ ಒಗ್ಗಟ್ಟನ್ನು ಬಯಸಿದ್ದರು.